# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| 1 | ವಿಧಾನ ಪರಿಷತ್ ಸದಸ್ಯರ ಹೆಸರು | ಶ್ರೀ ಐವನ್ ಡಿ'ಸೋಜಾ (ವಿಧಾನ ಸಭಾ ಕ್ಷೇತ್ರದಿಂದ ಚುನಾಯಿತರಾದವದರು) |
| 2 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | **976** |
| 3 | ಉತ್ತರಿಸಬೇಕಾದ ದಿನಾಂಕ | 20.08.2025 |
| 4 | ಉತ್ತರಿಸಬೇಕಾದವರು | ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು |
| 5 | ವಿಷಯ | ಮೀನುಗಾರಿಕೆ ಇಲಾಖೆಯಿಂದ ಮೀನುಗಾರಿಕೆ ಜಟ್ಟಿ ಪ್ರಾರಂಭಿಸುವ ಬಗ್ಗೆ |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಮೀನುಗಾರಿಕೆಗಾಗಿ ಸ್ಥಾಪಿಸಿರುವ ಮೀನುಗಾರಿಕೆ ಬಂದರುಗಳ ಸಂಖ್ಯೆ ಎಷ್ಟು, ಯಾವ ಹಂತದಲ್ಲಿದೆ; | ರಾಜ್ಯದಲ್ಲಿ ಒಟ್ಟು 11 ಅಧಿಸೂಚಿತ ಮೀನುಗಾರಿಕೆ ಬಂದರುಗಳಿವೆ.<br>ಎಲ್ಲಾ ಅಧಿಸೂಚಿತ ಮೀನುಗಾರಿಕೆ ಬಂದರುಗಳು ಕಾರ್ಯನಿರ್ವಹಿಸುತ್ತಿವೆ. |
| ಆ | ಕಳಪೆ ಕಾಮಗಾರಿಯಿಂದ ಮೀನುಗಾರಿಕೆಗೆ ಬಂದರುಗಳಲ್ಲಿ ಕುಸಿತ ಉಂಟಾಗಿದ್ದು ಪತ್ರಿಕೆಗಳಲ್ಲಿ ಪ್ರಚಾರ ಕೊಂಡ್ಡಿದರ ಬಗ್ಗೆ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು) | ದಕ್ಷಿಣ ಕನ್ನಡ ಜಿಲ್ಲೆಯ ಕುಳಾಯಿಯಲ್ಲಿ ನಿರ್ಮಾಣ ಹಂತದಲ್ಲಿರುವ ಮೀನುಗಾರಿಕೆ ಬಂದರಿನ ಬಗ್ಗೆ ಸ್ಥಳೀಯ ಪತ್ರಿಕೆಗಳಲ್ಲಿ ಸುದ್ದಿ ಪ್ರಕಟವಾಗಿತ್ತು. ಸದರಿ ಕಾಮಗಾರಿಯನ್ನು NMPA ಮಂಗಳೂರು ರವರ ಮೂಲಕ ಅನುಷ್ಠಾನಗೊಳಿಸುತ್ತಿದ್ದು, ಮೀನುಗಾರರು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಪರಿಗಣಿಸಿ ಬಂದರು ನಿರ್ಮಾಣದ ಕಾಮಗಾರಿಯನ್ನು ಆದಷ್ಟು ಬೇಗನೆ ಪೂರ್ಣಗೊಳಿಸಿ ಇಲಾಖೆಗೆ ಹಸ್ತಾಂತರಿಸಲು ನವ ಮಂಗಳೂರು ಬಂದರು ಪ್ರಾಧಿಕಾರ NMPA, ಮಂಗಳೂರು ರವರಿಗೆ ನಿರ್ದೇಶನ ನೀಡಲಾಗಿದೆ. |
| ಇ. | ಮೀನುಗಾರಿಕೆ ಇಲಾಖೆಯಿಂದ ಮೀನುಗಾರಿಕೆಗೆ ಜಟ್ಟಿ ಪ್ರಾರಂಭಿಸಲು ಕೇಂದ್ರ ಸರ್ಕಾರದಿಂದ ದೊರೆತಿರುವ ಅನುದಾನ ಎಷ್ಟು; ಈ ಅನುದಾನವನ್ನು ಯಾವ ಯಾವ ಕಾಮಗಾರಿಗಳಿಗೆ ಉಪಯೋಗಿಸಲಾಗಿದೆ: (ವಿವರ ನೀಡುವುದು) | ಕೇಂದ್ರ ಪುರಸ್ಕೃತ ಯೋಜನೆಯಡಿ ಉಡುಪಿ ಜಿಲ್ಲೆಯ ಹೆಜಮಾಡಿ ಕೋಡಿಯಲ್ಲಿ ಮೀನುಗಾರಿಕೆ ಬಂದರು ನಿರ್ಮಾಣ ಕಾಮಗಾರಿಯನ್ನು ರೂ. 138.60 ಕೋಟಿಗಳಲ್ಲಿ ಕೈಗೊಳ್ಳಲು ಮಂಜೂರಾತಿ ನೀಡಿದೆ. ಕೇಂದ್ರದ ಪಾಲಿನ ವಿವರ ಈ ಕೆಳಗಿನಂತಿದೆ.<br>Ministry of Fisheries, Animal Husbandry and Dairying ರಡಿ (25%) — ರೂ.34.65 ಕೋಟಿ<br>Ministry of Ports, Shipping and — ರೂ.34.65 |

| | | | |
|---|---|---|---|
| | | waterways ರಡಿ (ಸಾಗರಮಾಲಾ II) (25%) | ಕೋಟಿ |
| | | ಒಟ್ಟು ಕೇಂದ್ರದ ಪಾಲು (50%) | ರೂ.69.30 ಕೋಟಿ |
| ಈ | ಸಾಗರಮಾಲಾ ಯೋಜನೆಗಳು ಯಾವ ಭಾಗದಲ್ಲಿ ಪೂರ್ಣಗೊಂಡಿದೆ; ಪ್ರಸ್ತುತ ಇರುವ ಪ್ರಗತಿಯೇನು; (ಮಾಹಿತಿ ನೀಡುವುದು) | ಸಾಗರಮಾಲಾ ಯೋಜನೆಯಡಿ ಪ್ರಸ್ತುತ ಹೆಜಮಾಡಿ ಮತ್ತು ಕುಳಾಯಿಯಲ್ಲಿ ಮೀನುಗಾರಿಕೆ ಬಂದರು ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲಾಗಿದೆ. ಸದರಿ ಕಾಮಗಾರಿಗಳು ಪ್ರಗತಿಯಲ್ಲಿವೆ. | |
| ಉ | 2023-24 ಮತ್ತು 2024-25 ರಲ್ಲಿ ಮೀನುಗಾರಿಕಾ ಪ್ರದೇಶಗಳಿಗೆ ಎಷ್ಟು ರಸ್ತೆಗಳನ್ನು ನಿರ್ಮಾಣ ಮಾಡಲಾಗಿದೆ: ಇದಕ್ಕೆ ತಗಲುವ ವೆಚ್ಚ ಎಷ್ಟು? (ವಿವರ ನೀಡುವುದು) | 2023-24 ಮತ್ತು 2024 2025ನೇ ಸಾಲಿನಲ್ಲಿ ಕರಾವಳಿ ಜಿಲ್ಲೆಗಳಲ್ಲಿನ ಮೀನುಗಾರಿಕಾ ಪ್ರದೇಶಗಳಲ್ಲಿ ಯಾವುದೇ ಮೀನುಗಾರಿಕೆ ಕೊಂಡಿ ರಸ್ತೆಗಳನ್ನು ಹೊಸದಾಗಿ ನಿರ್ಮಾಣ ಮಾಡಿರುವುದಿಲ್ಲ.<br>2024-25 ನೇ ಸಾಲಿನಲ್ಲಿ ಸರ್ಕಾರ ಅಧಿಸೂಚಿಸಿರುವ ಮೀನುಗಾರಿಕೆ ಕೊಂಡಿ ರಸ್ತೆಗಳ ನಿರ್ವಹಣೆ/ದುರಸ್ತಿಯನ್ನು ರೂ.20.00 ಕೋಟಿಗಳ ವೆಚ್ಚದಲ್ಲಿ ಮಾಡಲಾಗಿದೆ. | |

ಸಂಖ್ಯೆ: ಪಸಂಮೀ ಇ-149 ಮೀಇಇ 2025

(ಮಂಕಾಳ ಎಸ್. ವೈದ್ಯ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು